<u>ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.</u>

<u>ಮುಂದವರೆದ ಪಾಟೀ ಸವಾಲುಃ 14 ನೇ ಪ್ರತಿವಾದಿ ಪರವಾಗಿ ಶ್ರೀ ಅರ ಎ ಪಿ ವಕೀಲರಿಂದ</u>

7. ನನ್ನ ಅಜ್ಜ ಅಬ್ದುಲ ರಹೀಮ 13–12–1984 ರಲ್ಲಿ ಮರಣ ಹೊಂದಿದ್ದಾರೆ ಅಂದರೆ ಸರಿ . ಅಬ್ದುಲ ರಜಾಕ ರವರು ಎಮ ಎಸ ಸಿ ವಿದಾಭ್ಯಾಸ ಮಾಡಿ , ಡಿಗ್ರಿ ಕಾಲೇಜದಲ್ಲಿ ಉಪನ್ಯಾಸಕರಾಗಿ ಸೇವೆ ಸಲಿಸುತ್ತಿದ್ದರು ಅಂದರೆ ಸರಿ . ಅಬ್ದುಲ ರಜಾಕ ಇವರು ನನ್ನ ತಂದೆ ಮತ್ತು ಕಾಕಾನಿಗೆ ಒಳ್ಳೆಯ ವಿದಾಭ್ಯಾಸ ಕೊಡಿಸಿದ್ದರು ಅಂದರೆ ಸರಿ . ನನ್ನ ತಂದೆಯ ಪೂರ್ಣ ಹೆಸರು ಶಿರಾಜ ಅಹಮದ ಅಬ್ದುಲ ರಹೀಮಸಾಬ ಮುಲ್ಲಾ ಅಂದರೆ ಸರಿ . 9–6–1956 ರಲ್ಲಿ ಸರಕಾರಿ ಉರ್ದು ಶಾಲೆ ಕಿತ್ತೂರದಲ್ಲಿ 6 ನೇ ತರಗತಿವರೆಗೆ ನಮ್ಮ ತಂದೆ ವಿದಾಬ್ಯಾಸ ಮಾಡಿದ್ದಾರೆ ಅಂದರೆ ಸರಿಯಲ್ಲ . ಸಾಕ್ಷಿಗೆ ಈಗ ಒಂದು ಶಾಲೆ ದಾಖಲೆ ತೋರಿಸಿ, ಸದರಿ ದಾಖಲೆ ಪ್ರಕಾರ ಅವರ ತಂದೆ 6 ನೇ ತರಗತಿ ವರೆಗೆ ಓದಿದ್ದಾರೆ ಅಂದರೆ ಸಾಕ್ಷಿ ಒಪ್ಪಿಕೊಳ್ಳುತ್ತಾರೆ . ಧಾರವಾಡದ ಭಾಷನ ಮೀಶನ ಶಾಲೆಯಲ್ಲಿ ತಮ್ಮ ವಿದಾಭಾಸ ಮುಂದುವರೆಸಿರುತ್ತಾರೆ ಅಂದರೆ ಸರಿಯಲ್ಲ . ಎಸ ಎಸ ಎಲ ಸಿ ವರೆಗೆ ಅಲ್ಲಿ ಶಾಲೆ ಕಲಿತಿರುತ್ತಾರೆ ಅಂದರೆ ಸರಿಯಲ್ಲ. ನಮ್ಮ ತಂದೆ ಸಹಿ ಮಾಡುತ್ತಿದ್ದರು ಹೆಬ್ಬಟ್ಟಿನ ಗುರುತು

ಹಾಕುತ್ತಿರಲಿಲ್ಲ ಅಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗಲೀ ಅಂತಾ ನಾನು ನಮ್ಮ ತಂದೆ ಶಾಲೆ ಕಲಿತಿಲ್ಲ , ಸಹಿ ಮಾಡಲು ಬರುತ್ತಿರಲಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

8. ದಾವೆ ಆಸ್ತಿ ಹೂರೆತು ಪಡಿಸಿ , ಸಿ ಟಿ ಎಸ ನಂ 104/4, 104/15 ರಿಂದ 104/19 ಮತ್ತು ಎಂ ಎಫ್ ನಂ 104/1 ಎ 11 ಬಿ ಪ್ಲಾಟಗಳು ನಾವು ವಾದಿಯರ ಹೆಸರಿಗೆ ಇರುತ್ತದೆ ಅಂದರೆ ನನ್ನ ಹೆಸರಿಗೆ ಇರುತ್ತದೆ . ಈ ದಾವೆಯಲ್ಲಿ ಸದರಿ ಆಸ್ತಿಗಳನ್ನು ಉದೇಶಪೂರ್ವಕವಾಗಿ ಬಿಟ್ಟಿರುತ್ತೇವೆ ಅಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ತಂದೆ ಖರೀದಿಸಿದ ಆಸ್ತಿ . ಸದರಿ ಆಸ್ತಿಗಳನ್ನು ನಮ್ಮ ತಂದೆ ಖರೀದಿಸಿರುತ್ತಾರೆ ಅಂತಾ ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತೇವೆ . ಖರೀದಿ ಪತ್ರಗಳನ್ನು ಹಾಜರು ಮಾಡಿರುತ್ತೇವೆ . ಮೇಲ್ಕಂಡ ಆಸ್ತಿಗಳು ಮೊದಲು ಅಬ್ದುಲ ರಜಾಕ ಮುಲ್ಲಾ ರವರಿಗೆ ಇತ್ತು ಅಂದರೆ ಸರಿಯಲ್ಲ. ಅಬ್ದುಲ ರಜಾಕ ಮರಣ ಹೂಂದಿದ ನಂತರ ಅವರ ಮಕ್ಕಳಿಗೆ ಗೊತ್ತಾಗದಂತೆ ನಮ್ಮ ಹೆಸರು ಸೇರಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. 5-11-1986 ರಂದು ಮನೆತನಲ್ಲಿ ಮಾಡಿಕೂಂಡ ವ್ಯವಸ್ಥೆ ಪ್ರಕಾರ ಕಿತ್ತೂರದಲ್ಲಿ ಇದ್ದ ಆಸ್ತಿಗಳು ಅಬ್ದುಲ

ರಜಾಕ ಹೆಸರಿಗೆ ಮತ್ತು ನಮ್ಮ ತಂದೆ ಶಿರಾಜ ರವರ ಹೆಸರಿಗೆ ಬಂತು ಅಂದರೆ ಸರಿಯಲ್ಲ . 5-11-1986 ರಿಂದ ಇಲ್ಲಿವರೆಗೆ ನಾವು ದಾವಾದ ಆಸ್ತಿಯಲ್ಲಿ ಸಹ ಸಾಗುವಳಿಯಲ್ಲಿ ಮುಂದುವರೆದಿಲ್ಲ ಮತು ದಾವಾದ ಆಸ್ತಿಯಲ್ಲಿ ಯಾವುದೇ ಹಕ್ಕು ಹೊಂದಿಲ್ಲ ಅಂದರೆ ಸರಿಯಲ್ಲ . 13 ಮತ್ತು 14 ನೇ ಪ್ರತಿವಾದಿಯರು ಖರೀದಿ ಮಾಡಿದ ನಂತರ ಅವರ ಹೆಸರು ದಾವಾದ ಆಸ್ತಿಗಳಿಗೆ ದಾಖಲಾಗಿದ್ದನು ಸಹ ನಾನು ಇಲ್ಲಿವರೆಗೆ ಪ್ರಶ್ನೆ ಮಾಡಿಲ್ಲ ಅಂದರೆ ನನಗೆ ಮಾಹಿತಿ ಇರಲಿಲ್ಲ . 13 ಮತ್ತು 14 ನೇ ಪ್ರತಿವಾದಿಯರ ವಿರುದ್ದ ನಾವು ಖೊಟ್ಟಿ ಕೇಸನ್ನು ದಾಖಲು ಮಾಡಿದೇವೆ ಅಂದರೆ ಸರಿಯಲ್ಲ . ಖರೀದಿಸಿದ ಆಸ್ತಿಗಳಿಗೆ 13 ಮತ್ತು 14 ನೇ ಪ್ರತಿವಾದಿಯರು ಕಬಜಾ ವಹಿವಾಟು ವಹಿಸಿಕೊಂಡು ಬಂದಿರುತ್ತಾರೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ 1 ರಿಂದ 5 ನೇ, 15 ಪ್ರತಿವಾದಿ ಪರವಾಗಿ ಶ್ರೀ ಎಸ ಎಮ ಬಿ ವಕೀಲರು ಶ್ರೀ ಎಸ ಎ ಬಿ ವಕೀಲರ ಪರವಾಗಿ ಸಮಯ ಕೇಳಿರುತ್ತಾರೆ .

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

SAK ಬೈಲಹೊಂಗಲ.